

ಸ್ಥಳಗಳಲ್ಲಿ ನಾವು ರೂಪಿಸುವ ಲಿಂಗ – ಪಾತ್ರಗಳ ಈ ಕಟ್ಟಳೆಗಳನ್ನು ಮೀರಿ ನಡೆವ ಮಹಿಳೆಯರನ್ನು ಹೇಗೆ ಹಿಂಸೆ, ದೌರ್ಜನ್ಯಗಳ ಮೂಲಕ ನಿಯಂತ್ರಿಸುತ್ತೇವೆಯೋ ಹಾಗೆಯೇ ಉದ್ಯೋಗ ಸ್ಥಳಗಳಲ್ಲಿ ಉಳಿದವರು ಮಹಿಳೆಯರನ್ನು ನಡೆಸಿಕೊಳ್ಳುವ ರೀತಿಗಳಲ್ಲಿ ಅದು ಪ್ರಕಟವಾಗುತ್ತದೆ. ಮಹಿಳೆಯ ಇಚ್ಛೆಯ ವಿರುದ್ಧ ಆಕೆಯನ್ನು ಮುಟ್ಟುವುದು, ಕಿರಿಕಿರಿಯಾಗುವಂತೆ ಮಾತನಾಡಿಸುವುದು, ಸಂಬೋಧಿಸುವುದು, 'ಕಾಳಜಿ'ಯ ಹೆಸರಿನಲ್ಲಿ ಆಕೆಯ ವೈಯಕ್ತಿಕ ಜೀವನದಲ್ಲಿ ಮೂಗು ತೂರಿಸುವುದು, ಅನಗತ್ಯ ವೈಯಕ್ತಿಕ ಪ್ರಶ್ನೆಗಳನ್ನು ಕೇಳುವುದು, ಹಿಂಬಾಲಿಸುವುದು, ಮಾನಸಿಕವಾಗಿ ಹಿಂಸಿಸುವುದು, ನಿಕಟ ಸಂಬಂಧಕ್ಕೆ ಆಕೆಯ ಇಚ್ಛೆಯ ವಿರುದ್ಧ ಯತ್ನಿಸುವುದು, ಲೈಂಗಿಕ ಸಂಬಂಧಕ್ಕೆ ಒತ್ತಾಯಿಸುವುದು – ಇವೆಲ್ಲವನ್ನೂ ನಾವು ಉದ್ಯೋಗದ ಸ್ಥಳಗಳಲ್ಲಿ ಕಾಣುತ್ತೇವೆ.

ಉದ್ಯೋಗ ಸ್ಥಳಗಳಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳಗಳೂ ನಡೆಯುತ್ತವೆ. ಉದ್ಯೋಗದ ಅವಶ್ಯಕತೆಯಿಂದಾಗಿಯೋ, ತಾವೇ ಜನರ ದೃಷ್ಟಿಯಿಂದ ಕೆಟ್ಟವರಾಗಬೇಕಾಗುತ್ತದೆ ಎಂಬ ಆತಂಕದಿಂದಲೋ, ಜನರ ಬಾಯಿಗೆ ತುತ್ತಾಗುವ ಭಯಕ್ಕೋ, 'ತೊಂದರೆ ಹುಟ್ಟುಹಾಕುವ'ವರಾಗಿ ತಮ್ಮನ್ನು ಉಳಿದವರು ಕಾಣಬಹುದೆಂಬ ಭಯದಿಂದಲೋ ಎಷ್ಟೋ ಹೆಣ್ಣುಮಕ್ಕಳು ಇವೆಲ್ಲವನ್ನೂ ಬಾಯಿ ಮುಚ್ಚಿಕೊಂಡು

**ಉದ್ಯೋಗದ ಸ್ಥಳದಲ್ಲಿ ಆಂತರಿಕ ಸಮಿತಿ ಇರಬೇಕು. ಈ ಸಮಿತಿಯ ಬಗ್ಗೆ ಉದ್ಯೋಗ ಸ್ಥಳದ ಪ್ರತಿಯೊಬ್ಬನಿಗೂ ಮಾಹಿತಿ ಇರಬೇಕು. ಕಾನೂನು ಏನು ಹೇಳುತ್ತದೆ, ಲೈಂಗಿಕ ಕಿರುಕುಳ ಎಂದರೇನು, ಹಾಗಾದಾಗ ಏನು ಮಾಡಬೇಕು ಎಂಬುದರ ಬಗ್ಗೆ ಪ್ರತಿಯೊಬ್ಬ ಉದ್ಯೋಗಿಗೂ ಅರಿವನ್ನು ಮೂಡಿಸಬೇಕು. ಪ್ರತೀ ದೂರಿನ ಮೇಲೆ ಈ ಆಂತರಿಕ ಸಮಿತಿ ತನಿಖೆ ನಡೆಸಿ 90 ದಿನದೊಳಗೆ ತಮ್ಮ ವರದಿಯನ್ನು ನೀಡಬೇಕು. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ತಮ್ಮ ವರದಿಯಲ್ಲಿ ನಮೂದಿಸಿರಬೇಕು.**

ಸಹಿಸುತ್ತಾರೆ. ಇಲ್ಲವೇ ಸಾಧ್ಯವಾದವರು ಆ ಉದ್ಯೋಗ ಬಿಟ್ಟು ಬೇರೆ ಕಡೆ ಕೆಲಸ ಹುಡುಕಿಕೊಳ್ಳುತ್ತಾರೆ.

ಮಹಿಳೆಯರು ಹೀಗೇ ಇರಬೇಕು, ಹೀಗೇ ನಡೆದುಕೊಳ್ಳಬೇಕು ಎನ್ನುವ ನಂಬಿಕೆಗಳು ಹಾಗೂ ಪೂರ್ವಗ್ರಹಗಳು ಸಮಾಜದ ಪ್ರಜ್ಞೆಯಲ್ಲಿ ಅತ್ಯಂತ ಆಳವಾಗಿ ಬೇರೂರಿವೆ. ಈ ನಂಬಿಕೆ, ಪೂರ್ವಗ್ರಹಗಳಿಗೆ ತಕ್ಕಂತೆ ವ್ಯಕ್ತಿಗಳನ್ನು ಮತ್ತು ಅವರ ನಡವಳಿಕೆಗಳನ್ನು ನಿಯಂತ್ರಿಸಲಾಗುತ್ತದೆ. ಹಿಂಸೆ ಹಾಗೂ ಕ್ರೌರ್ಯದ ಬೇರೆಬೇರೆ ಪ್ರಕಾರಗಳು ಈ ನಿಯಂತ್ರಣದ ಒಂದು ರೀತಿಯೇ ಆಗಿದೆ.

ಈ ರೀತಿಯ ಹಿಂಸೆ, ಕಿರುಕುಳ ಮಹಿಳೆಯರ ಮೇಲೆ, ಅವರ ವ್ಯಕ್ತಿತ್ವ, ಕೆಲಸದ ದಕ್ಷತೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಉದ್ಯೋಗದ ಸ್ಥಳಗಳಲ್ಲಿ ಪುರುಷರ ಮೇಲೆ ದೌರ್ಜನ್ಯವೋ, ಕಿರುಕುಳಗಳೋ ಆಗುವುದಿಲ್ಲ ಎಂದಲ್ಲ. ಆದರೆ ಮಹಿಳೆಯರ ಮೇಲೆ ಲಿಂಗಾಧಾರಿತ ಹಿಂಸೆ, ಕಿರುಕುಳ ನಡೆಯುತ್ತದೆ. ಆಕೆ ಮಹಿಳೆ ಎನ್ನುವ ಒಂದೇ ಕಾರಣಕ್ಕೆ, ಆಕೆಯನ್ನು ಸಮಾಜ ಕಾಣುವ ರೀತಿಯಿಂದಾಗಿ ಈ ಕಿರುಕುಳಗಳು ನಡೆಯುತ್ತವೆ. ಹಾಗಾಗಿ ಮಹಿಳೆಯರನ್ನು ಈ ರೀತಿಯಾಗಿ ನಡೆಸಿಕೊಳ್ಳುವುದು ತಪ್ಪು ಎಂಬ ಅರಿವನ್ನು ಜನರಲ್ಲಿ ಮೂಡಿಸುವುದಕ್ಕಾಗಿ ಹಾಗೂ ಮಹಿಳೆಯರು ಇಂಥ ಕಿರುಕುಳಗಳನ್ನು ಉದ್ಯೋಗದ ಸ್ಥಳಗಳಲ್ಲಿ ಎದುರಿಸಿದರೆ ಯಾವ ರೀತಿ, ತಮ್ಮ ಉದ್ಯೋಗದ ಸ್ಥಳದೊಳಗೇ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದು ಎಂಬುದನ್ನು ಈ ಕಾನೂನು ಹೇಳುತ್ತದೆ.

### ಆಂತರಿಕ ಸಮಿತಿ ಕಡ್ಡಾಯ

2013ರಲ್ಲಿ ಜಾರಿಗೆ ಬಂದ 'ಉದ್ಯೋಗದ ಸ್ಥಳಗಳಲ್ಲಿ ಮಹಿಳೆಯರನ್ನು ಲೈಂಗಿಕ ಕಿರುಕುಳದಿಂದ ರಕ್ಷಿಸುವ ಕಾನೂನು', ಎಲ್ಲಾ ಉದ್ಯೋಗ ಸ್ಥಳಗಳಲ್ಲಿ ಒಂದು ಆಂತರಿಕ ಸಮಿತಿ ಇರಬೇಕು

